ಎಲ್ಲ ಪ್ರಶ್ನೆಗಳಿಗೆ ಉತ್ತರ ಬರೆದ ನಂತರ ನಿಮ್ಮ ಅಂತರಂಗದ ದೇವಾಲಯಕ್ಕೆ ಪ್ರವೇಶಿಸಿ ಭಗವಂತನಿಗೆ ಮಂತ್ರವನ್ನು ಅರ್ಪಿಸಿ ಮನಸ್ಸಿನಲ್ಲಿಯೇ ದೀಪಾರತಿಯನ್ನು ಬೆಳಗಬೇಕು. ಆ ಸಂದರ್ಭದಲ್ಲಿ "ದೇವರೇ, ನಾನು ಬರೆದಿರುವ ಉತ್ತರಗಳಲ್ಲಿ ಏನಾದರೂ ತಪ್ಪುಗಳಿದ್ದರೆ ದಯವಿಟ್ಟು ಅದನ್ನು ನನ್ನ ಕಣ್ಣಿಗೆ ಕಾಣುವಂತೆ ಮಾಡು" ಎಂದು ಪ್ರಾರ್ಥನೆ ಮಾಡಿ. ಅನಂತರ ನಿಮ್ಮ ಉತ್ತರಪತ್ರಿಕೆಯನ್ನು ಒಮ್ಮೆ ಮೊದಲಿನಿಂದ ಗಮನಿಸಿ. ನಿಮ್ಮ ಕಣ್ಣುಗಳಿಗೆ ತಿಳಿಯದೇ ಆಗಿರುವ ತಪ್ಪುಗಳನ್ನು ದೇವರು ನಿಮಗೆ ತೋರಿಸುತ್ತಾನೆ.

## ಭಗವಂತನಿಗೆ ಕೃತಜ್ಞತೆಯಿಂದ ಸಲ್ಲಿಸುವ ಪ್ರಾರ್ಥನೆ

ಪರೀಕ್ಷೆ ಮುಗಿಸಿ ಮನೆಗೆ ತೆರಳುವಾಗ ಮನಸ್ಸಿನಲ್ಲಿಯೇ ಭಗವಂತನ ಪಾದಗಳಿಗೆ ಶ್ರೀಗಂಧವನ್ನು ಹಚ್ಚಿ ಹಣೆಗೆ ತಿಲಕವಿಟ್ಟು, ಹೂವಿನಿಂದ ಅರ್ಚನೆ ಮಾಡಿ, ಆರತಿ ಬೆಳಗಿ ಪಾದಪೂಜೆಯನ್ನು ಮಾಡಿ. ಆ ಸಂದರ್ಭದಲ್ಲಿ

"ಭಗವಂತ, ನಿನ್ನ ಕೃಪೆಯಿಂದ ಪರೀಕ್ಷೆಗೆ ಬರೆದಿದ್ದೇನೆ. ಅದಕ್ಕಾಗಿ ಅತ್ಯಂತ ಕೃತಜ್ಞನಾಗಿದ್ದೇನೆ. ಇದರಲ್ಲಿ ಉತ್ತಮ ಮಟ್ಟದಲ್ಲಿ ಅಂಕಗಳು ಗಳಿಸುವಂತೆ ನನಗೆ ಕೃಪೆ ತೋರು" ಎಂದು ಪ್ರಾರ್ಥಿಸಿ.

**ಅತ್ಯಂತ ಮುಖ್ಯ ವಿಷಯ :** ಪರೀಕ್ಷಾ ಸಮಯದಲ್ಲಿ ಟಿ.ವಿ. ವೀಕ್ಷಿಸುವುದು ಇಲ್ಲವೆ ಹಾಡುಗಳನ್ನು ಕೇಳುವುದು ಮುಂತಾದವುಗಳನ್ನು ಮಾಡದೆ ಮನಸ್ಸನ್ನು ಹತೋಟಿಯಲ್ಲಿರಿಸಿಕೊಳ್ಳಬೇಕು. ಸದಾ ನಿಮ್ಮ ಅಂತರಂಗದ ದೇವಾಲಯದಲ್ಲಿ ಮಂತ್ರವನ್ನು ಹೇಳಿಕೊಳ್ಳುತ್ತಾ ಇರಬೇಕು.

ಹೀಗೆ ಮಾಡುವುದರಿಂದ ನೀವು ಖಂಡಿತವಾಗಿಯೂ ಪರೀಕ್ಷೆಯಲ್ಲಿ ಉತ್ತಮ ಮಟ್ಟದ ಅಂಕಗಳನ್ನು ಪಡೆದು ಉತ್ತೀರ್ಣರಾಗುತ್ತೀರಿ.

ಸತತ ದೈವ ಸ್ಮರಣೆಯಿಂದ ಮಂತ್ರವನ್ನು ಜಪಿಸುವುದರಿಂದ ಉತ್ತಮ ವಿದ್ಯಾಭ್ಯಾಸ, ಸಕಲ ಸಂಪತ್ತು ಮತ್ತು ಉತ್ತಮ ಬಗೆಯ ಜ್ಞಾನವನ್ನು ಪಡೆಯಬಹುದು.

**ವರ್ತಮಾನ ಕಾಲವನ್ನು ಉತ್ತಮ ರೀತಿಯಲ್ಲಿ ಬಳಸಿಕೊಂಡರೆ ಬೇರೆಲ್ಲಾ ಕಾಲವೂ ಉನ್ನತ ರೀತಿಯಲ್ಲಿಯೇ ಇರುತ್ತದೆ.**



## ವಿದ್ಯಾರ್ಥಿಗಳಿಗಾಗಿ ಸಾಮೂಹಿಕ ಪ್ರಾರ್ಥನೆ

ನೀವು ಪರೀಕ್ಷೆಯಲ್ಲಿ ತೇರ್ಗಡೆಯಾಗಲು ನಮ್ಮ ಸಾಮೂಹಿಕ ಪ್ರಾರ್ಥನಾ ಸಂಘಕ್ಕೆ ಫೋನ್ ಮಾಡಿ ನಿಮ್ಮ ಹೆಸರು, ವಿಳಾಸ ಮತ್ತು ಓದುತ್ತಿರುವ ತರಗತಿಯ ವಿವರಗಳನ್ನು ತಿಳಿಸಿ. ನಿಮ್ಮ ತೇರ್ಗಡೆಗಾಗಿ ನಾವೂ ಭಗವಂತನಲ್ಲಿ ಪ್ರಾರ್ಥನೆ ಮಾಡಲು ಕಾತುರರಾಗಿದ್ದೇವೆ.

ಸಂಪರ್ಕಿಸಿ : ಫೋನ್ : 04545–225567

ಸೆಲ್ : 8680082425 / 9750682449

**ಒಲವಿನ ಹಾರೈಕೆ**

ಪ್ರಿಯ ಸಹೋದರ ಸಹೋದರಿಯರೇ ! ನಿಮಗೆ ನಮ್ಮ ಹೃತ್ಪೂರ್ವಕ ನಮಸ್ಕಾರಗಳು. ಸತ್ವಭರಿತ ಆಹಾರಕ್ಕೆ ರುಚಿ ನೀಡುವುದು ಉಪ್ಪು ಎಂಬುದು ನಿಮಗೆಲ್ಲರಿಗೂ ತಿಳಿದಿರುವ ವಿಷಯವೇ ಆಗಿದೆ.

ಇದೇ ರೀತಿಯಲ್ಲಿ ನಿಮ್ಮ ವಿದ್ಯಾಭ್ಯಾಸಕ್ಕೆ ಮತ್ತು ಸುಖಪ್ರದ ಜೀವನಕ್ಕೆ ಭಗವಂತನನ್ನು ಸ್ಮರಿಸಿ ಮಂತ್ರವನ್ನು ಹೇಳಿ ನಮಸ್ಕರಿಸಬೇಕೆಂದು ಶ್ರೇಷ್ಠವಾದ ಹಿಂದೂ ಧರ್ಮ ಹೇಳುತ್ತದೆ. ನೀವು ಹೀಗೆ ಅನುಸರಿಸಿ ಉನ್ನತಿಗೇರಬೇಕೆಂದು ಹಾರೈಕೆ.

**"ಕಠಿಣ ಶ್ರಮ ಮತ್ತು ದೇವರ ನೆನಪು ನಮ್ಮನ್ನು ಹಲವು ಮಾರ್ಗಗಳಲ್ಲಿ ಉನ್ನತಿಗೇರಿಸುತ್ತದೆ."**


**ಹಿಂದೂ ಯುವಜನ ಆಸ್ತಿಕ ಸೇವಾ ಸಂಘ**

**HINDU YOUTH SPIRITUAL SEVA SANGAM**

&

**ಹಿಂದೂ ಸಂಘಟನಾ ಜಾಗೃತಿ ಪರಿಷತ್ತು**

**HINDU UNITED PROGRESSIVE MOVEMENT**

**Dhuraimurugar Shiva Meditation Sabha,**
**Palani-Dindigul Main Road, Kanakkanpatti Post,**
**PALANI, DINDIGUL Dist. - 624 613, TAMILNADU.**

ವೆಬ್ ಸೈಟ್ : www.templedivinesuccess.com & www.hinduupm.co.in

ಭಗವಂತನ ಸೇವೆಗೈಯಲು ಸಂಪರ್ಕಿಸಿ : karnatakahinduupm@gmail.com


ಎಂದೆಂದೂ ದೇವರ ಸೇವೆಯಲ್ಲಿ:

ಓಂ ನಮಶ್ಶಿವಾಯ ನಮೋ ನಮಃ

HINDU UPM

# ವಿದ್ಯಾರ್ಥಿ/ವಿದ್ಯಾರ್ಥಿನಿಯರು ಅಧ್ಯಯನದಲ್ಲಿ ಉನ್ನತ ಸಾಧನೆ ಮಾಡಲು ಸನಾತನ ಹಿಂದೂ ಧರ್ಮ ಬೋಧಿಸುವ ವಿಧಿ ವಿಧಾನಗಳು

# WAY TO GET SUCCESS IN STUDIES AND EXAMINATIONS




ಪ್ರಕಾಶಕರು

**ಹಿಂದೂ ಸಂಘಟನಾ ಜಾಗೃತಿ ಪರಿಷತ್ತು**

(ಶಿಕ್ಷಣ ವಿಭಾಗ)

ಕಣಕ್ಕನ್‌ಪಟ್ಟಿ ಅಂಚೆ, ಪಳನಿ, ದಿಂಡುಕಲ್ಲು ಜಿಲ್ಲೆ

ತಮಿಳುನಾಡು – 624 613

KANNADA

www.templedivinesuccess.com www.hinduupm.co.in

## ಜಯಶಾಲಿಗಳಾಗಲು ಆರು ಮಾರ್ಗಗಳು

1. ದೇಹಾರೋಗ್ಯವನ್ನು ಪಡೆಯಲು, ಸೋಮಾರಿತನವನ್ನು ತೊಡೆದು ಹಾಕಲು ಬೆಳಿಗ್ಗೆ ಹಾಗೂ ಸಂಜೆ ಸ್ವಲ್ಪ ಸಮಯ ಯೋಗಾಸನ ಮಾಡಬೇಕು.
2. ಪ್ರತಿದಿನ ತಪ್ಪದೆ ಕ್ರಮವಾಗಿ ಅಧ್ಯಯನದಲ್ಲಿ ತೊಡಗುವುದು
3. ಒಳ್ಳೆಯುವರೊಂದಿಗೆ ಸಹವಾಸ ಉತ್ತಮ ನಡವಳಿಕೆಗೆ ದಾರಿಯಾಗುತ್ತದೆ.
4. ಕಷ್ಟಕರವಾದ ದುಡಿಮೆ, ಭಗವಂತನ ಸ್ಮರಣೆ ಹಾಗೂ ವಿನಯ ಅಗತ್ಯ
5. ದೇಶಭಕ್ತಿ
6. ಗುರಿಯನ್ನು ಸಾಧಿಸಲು ಮುನ್ನಡೆಯಬೇಕು.

## ಅಂದಂದಿನ ಅಧ್ಯಯನ ನಡೆಸುವ ವಿಧಾನ

ಅಧ್ಯಯನ ಪ್ರಾರಂಭಿಸುವ ಮೊದಲು ಮನಸ್ಸಿನಲ್ಲಿ ನಿಮಗೆ ಇಷ್ಟವಾದ ದೇವಾಲಯವನ್ನು ನೆನೆಯುತ್ತಾ

**ಓಂ ನಮಶ್ಶಿವಾಯ ನಮೋ ನಮಃ**
**ಓಂ ಸಚ್ಚಿದಾನಂದಾಯ ನಮೋ ನಮಃ**
**ಓಂ ಸದ್ಗುರುನಾಥಾಯ ನಮೋ ನಮಃ**

ಎಂದು ಮಂತ್ರವನ್ನು ಜಪಿಸುತ್ತಾ ಭಗವಂತನ ಪಾದಗಳಲ್ಲಿ ಹೂಗಳನ್ನು ಅರ್ಪಿಸಿ 5ರಿಂದ 15 ನಿಮಿಷಗಳವರೆಗೆ ಪೂಜಿಸಬೇಕು.

ಅನಂತರ ನಿಮ್ಮ ಅಂತರಂಗದಲ್ಲಿ ಬೆಳಕು ಬೀರುವ ಭಗವಂತನಿಗೆ ಮನಸ್ಸಿನಲ್ಲಿಯೇ ದೀಪಾರತಿ ಬೆಳಗಬೇಕು.

"ಸ್ವಾಮಿ, ನಾನು ಈಗ ಓದುವ ಪಾಠ ನನಗೆ ಅರ್ಥವಾಗಬೇಕು. ಚೆನ್ನಾಗಿ ಮನಸ್ಸಿನಲ್ಲಿ ಮನನವಾಗಬೇಕು" ಎಂದು ಪ್ರಾರ್ಥನೆ ಮಾಡಿ ಭಗವಂತನ ಪಾದಗಳಿಗೆ ನಮಸ್ಕರಿಸಬೇಕು.

ಅನಂತರ ಗಮನಿಸಿ. ನಿಮ್ಮ ಅಧ್ಯಯನ ಕ್ರಮೇಣ ಹೆಚ್ಚು ಹೆಚ್ಚು ಸುಲಭವಾಗುವುದು. ಎಲ್ಲಾ ವಿಷಯಗಳಲ್ಲಿಯೂ ನಿಮಗೆ ಅಂಕಗಳು ಹೆಚ್ಚಾಗುತ್ತವೆ.

"ಭಗವಂತನನ್ನು ಸ್ಮರಿಸಿ ಮಂತ್ರವನ್ನು ಜಪಿಸಿ ಪೂಜಿಸುವ ರೀತಿಯನ್ನು ತಿಳಿದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಎಂದೆಂದಿಗೂ ಅಧ್ಯಯನದಲ್ಲಿ ಗೆಲುವು ಇದ್ದೇ ಇರುತ್ತದೆ."



## ಅಧ್ಯಯನದಲ್ಲಿ ತೊಡಗಿರುವಾಗ ಭಗವಂತನನ್ನು ಮತ್ತೆ ಮತ್ತೆ ಸ್ಮರಿಸುವುದು ಹೇಗೆ?

ಅಧ್ಯಯನದಲ್ಲಿರುವಾಗ ಆಗಾಗ್ಗೆ ದೇವರನ್ನು ಮನಸ್ಸಿನಲ್ಲಿಯೇ ಸ್ಮರಿಸಿ ಪಾದಗಳನ್ನು ಮುಟ್ಟುತ್ತಾ ಒಮ್ಮೆ ಮಂತ್ರವನ್ನು ಜಪಿಸಬೇಕು.

**"ಜ್ಞಾನದಿಂ ಮೇಲಿಲ್ಲ ಶ್ವಾನದಿಂ ಕೀಳಿಲ್ಲ**
**ಭಾನುಮಂಡಲದಿಂ ಬೆಳಗಿಲ್ಲ ಜಗದೊಳಗೆ**
**ಜ್ಞಾನವೇ ಮೇಲು ಸರ್ವಜ್ಞ"**

ಎಂಬ ಸರ್ವಜ್ಞ ಕವಿ ಹೇಳಿರುವ ಹೊನ್ನುಡಿಯನ್ನು ಎಂದಿಗೂ ಮರೆಯಬಾರದು.

ಅಧ್ಯಯನದಲ್ಲಿ ತೊಡಗಿರುವಾಗ ಆಗಾಗ್ಗೆ ಮನಸ್ಸನ್ನು ಭಗವಂತನತ್ತ ತಿರುಗಿಸಿ ಐದು ನಿಮಿಷ ಮಂತ್ರವನ್ನು ಜಪಿಸಬೇಕು.

ಆಗ, "ಮಹಾಸ್ವಾಮಿ, ಇದುವರೆಗೆ ನಾನು ಅಧ್ಯಯನ ಮಾಡಿದ ಎಲ್ಲವನ್ನೂ ಜ್ಞಾಪಕದಲ್ಲಿರುವಂತೆಯೂ ಮುಂದೆ ಓದುವ ಎಲ್ಲಾ ಪಾಠಗಳನ್ನು ಚೆನ್ನಾಗಿ ತಿಳಿದುಕೊಳ್ಳುವಂತೆಯೂ ನನಗೆ ಕೃಪಾಕಟಾಕ್ಷವನ್ನು ತೋರು" ಎಂದು ಪ್ರಾರ್ಥಿಸಿ ನಿಮ್ಮ ಅಧ್ಯಯನವನ್ನು ಮುಂದುವರೆಸಿರಿ.

## ಅಧ್ಯಯನ ಮತ್ತು ಪ್ರಾರ್ಥನೆ

ನಿಮ್ಮ ಅಧ್ಯಯನ ಮುಗಿದ ನಂತರ ನಿಮ್ಮ ಅಂತರಂಗದಲ್ಲಿರುವ ಭಗವಂತನಿಗೆ ಮಂತ್ರವನ್ನು ಹೇಳಿ ಮನಸ್ಸಿನಲ್ಲಿಯೇ ಪಾದಪೂಜೆ ಮಾಡಿ ಮುಗಿಸಬೇಕು. ಹಾಗೆ ಮುಗಿದ ನಂತರ

"ದೇವರೇ, ಈ ದಿನ ನಿನ್ನ ಕೃಪೆಯಿಂದ ಚೆನ್ನಾಗಿ ಓದಿದ್ದೇನೆ. ಕೃತಜ್ಞನಾಗಿದ್ದೇನೆ. ನಾನು ಇನ್ನು ಮುಂದೆ ಓದುವ ಎಲ್ಲಾ ಪಾಠಗಳೂ ನನ್ನ ಮನಸ್ಸಿನಲ್ಲಿ ಉಳಿಯುವಂತೆ ನನಗೆ ಕೃಪೆ ತೋರು. ಹಾಗೆಯೇ ನನ್ನಂತಹ ಇತರ ವಿದ್ಯಾರ್ಥಿ/ವಿದ್ಯಾರ್ಥಿನಿಯರು ಸಹ ನಿನ್ನನ್ನು ಧ್ಯಾನಿಸಿ ಪೂಜಿಸುವಂತೆಯೂ ಅಧ್ಯಯನದಲ್ಲಿ ತೊಡಗಿ ಸಫಲರಾಗಲು ಅವರಿಗೂ ಮನಸ್ಸುಂಟಾಗುವಂತೆ ಮಾಡು" ಎಂದು ಪ್ರಾರ್ಥಿಸಿ ನಿಮ್ಮ ಅಧ್ಯಯನವನ್ನು ಮುಕ್ತಾಯಗೊಳಿಸಿ.

**ವಿದ್ಯಾಭ್ಯಾಸ ಈ ಜನ್ಮಕ್ಕಾದರೆ ಜ್ಞಾನ ಶಿಕ್ಷಣ ಈ ಜನ್ಮಕ್ಕೆ ಹಾಗೂ ಮರುಜನ್ಮಕ್ಕೂ ಒದಗುತ್ತದೆ.**



ಈ ಆರಾಧನಾ ಕ್ರಮವನ್ನು ಅನುಸರಿಸಿ ಉತ್ತಮ ಸ್ಥಿತಿಯಲ್ಲಿ ಜೀವನ ನಡೆಸುವವರು ಧನ್ಯರಾಗಿದ್ದಾರೆ.

ಹೀಗೆ ಮೇಲೆ ಹೇಳಿದ ರೀತಿಯಲ್ಲಿ ನೀವು ಅನುಸರಿಸುತ್ತಾ ಬಂದಲ್ಲಿ ನಿಮ್ಮ ಅಧ್ಯಯನದಲ್ಲಿ ಜಯಶೀಲರಾಗುತ್ತೀರಿ. ಮುಂದಿನ ದಿನಗಳಲ್ಲಿ ನೀವು ಉತ್ತಮ ಮನುಷ್ಯರಾಗಿ ವಿದ್ಯೆಯನ್ನೂ ಸಂಪತ್ತನ್ನೂ ಗಳಿಸಿ ಸುಖ ಜೀವನವನ್ನು ನಡೆಸುತ್ತೀರಿ.

## ಪರೀಕ್ಷೆಯಲ್ಲಿ ಹೇಗೆ ಬರೆಯಬೇಕು ?

1. ಯಾವುದೇ ಬಗೆಯ ಗೊಂದಲವಿಲ್ಲದೆ ಸಾವಧಾನವಾಗಿ ಪರೀಕ್ಷೆಗೆ ಹೋಗಬೇಕು.
2. ಭಗವಂತನನ್ನು ನೆನೆಯುತ್ತಾ ಓದಿರುವುದನ್ನು ನೆನಪು ಮಾಡಿಕೊಳ್ಳುತ್ತಾ ಹೋಗಬೇಕು.
3. ಪ್ರಶ್ನೆಗಳಿಗೆ ಉತ್ತರ ಬರೆಯುವ ಮುಂಚೆ ಅಂತರಂಗದಲ್ಲಿರುವ ದೇವರನ್ನು ಮನಸ್ಸಿನಲ್ಲಿಯೇ ನೆನೆದು ದೀಪಾರಾಧನೆ ಮಾಡಿ, "ಭಗವಂತ, ಈ ಪರೀಕ್ಷೆಯಲ್ಲಿ ಒಳ್ಳೆಯ ಅಂಕಗಳನ್ನು ಗಳಿಸುವಂತೆ ನನಗೆ ಕರುಣಿಸು" ಎಂದು ಪ್ರಾರ್ಥಿಸಿ ಉತ್ತರ ಬರೆಯಲು ಪ್ರಾರಂಭಿಸಿ.
4. ಭಗವಂತನ ಪಾದದಡಿಯಲ್ಲಿ ನಿಂತು ಪರೀಕ್ಷೆಯಲ್ಲಿ ಬರೆಯುತ್ತಿರುವುದಾಗಿ ಮನಸ್ಸಿನಲ್ಲಿ ಭಾವನೆ ಮೂಡಬೇಕು.
5. ಯಾವುದೇ ಪ್ರಶ್ನೆಗಳನ್ನು ಬಿಡದೆ ತಿಳಿದಮಟ್ಟಿಗೆ ಧೈರ್ಯದಿಂದ ಭಗವಂತನನ್ನು ಮನಸಾರೆ ನೆನೆಯುತ್ತಾ ಬರೆಯಬೇಕು.

## ಪರೀಕ್ಷೆಯಲ್ಲಿ ಬರೆಯುವಾಗ ಭಗವಂತನಿಗೆ ನಮಸ್ಕರಿಸುವುದು ಹೇಗೆ ?

ಪರೀಕ್ಷೆಗೆ ಬರೆಯುವ ಸಮಯದಲ್ಲಿ ಆಗಾಗ್ಗೆ ಒಂದು ಘಳಿಗೆ ಭಗವಂತನ ಕಾಲಿಗೆ ಮನಸ್ಸಿನಲ್ಲಿಯೇ ನಮಿಸಿ ಮಂತ್ರವನ್ನು ಜಪಿಸಿ. ಅದೇ ಸಮಯದಲ್ಲಿ ಮನಸ್ಸಿನಲ್ಲಿ "ಒಂದು ಕೈಯಲ್ಲಿ ಭಗವಂತನ ಪಾದವನ್ನು ಹಿಡಿದುಕೊಳ್ಳಿ, ಮತ್ತೊಂದು ಕೈಯಲ್ಲಿ ಪರೀಕ್ಷೆಗೆ ಉತ್ತರ ಬರೆಯಿರಿ."

**ಸತತವಾಗಿ ದುಡಿಯುವವರೇ ಉತ್ತಮ ಜಯಶಾಲಿಗಳು**